## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 180 + 117 |
| ಉತ್ತರಿಸುವ ದಿನಾಂಕ | 05-03-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)<br>**ಮತ್ತು**<br>ಶ್ರೀ ಕೆ.ಪ್ರತಾಪ ಸಿಂಹ ನಾಯಕ್ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪದೇ ಪದೇ ಕಾವೇರಿ 2.0 ಸರ್ವರ್ ಡೌನ್ ಪರಿಣಾಮದಿಂದಾಗಿ ಆಸ್ತಿ ನೋಂದಣಿ ಪ್ರಕ್ರಿಯೆ ಅನಗತ್ಯವಾಗಿ ವಿಳಂಬವಾಗಿ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2025ನೇ ಸಾಲಿನಲ್ಲಿ ಕಾವೇರಿ-2.0 ತಂತ್ರಾಂಶದ ಮೇಲೆ Distributed Denial of Service (DDoS) Attack ನಿಂದಾಗಿ ದಿನಾಂಕ:06-01-2025 ರಿಂದ 05-02-2025 ರವರೆಗೆ ಋಣಭಾರ ಪ್ರಮಾಣ ಪತ್ರ ಸೇವೆಯಲ್ಲಿ ಹಾಗೂ ದಿನಾಂಕ:30-01-2025 ರಿಂದ 04-02-2025 ರವರೆಗೆ ದಸ್ತಾವೇಜುಗಳ ನೋಂದಣಿ ಸೇವೆಯಲ್ಲಿ ವ್ಯತ್ಯಯವಾಗಿರುತ್ತದೆ. |
| ಆ) | ಬಂದಿದ್ದಲ್ಲಿ ಸರ್ವರ್ ಸಮಸ್ಯೆಯಿಂದಾಗಿ ಕಾವೇರಿ 2.0 ತಂತ್ರಾಂಶದಲ್ಲಿ ಪ್ರತಿದಿನ ಒಂದಿಲ್ಲೊಂದು ಸಮಸ್ಯೆ ಎದುರಾಗುತ್ತಿದ್ದು, ತುರ್ತು ಕಾರಣಕ್ಕಾಗಿ ಜಾಗ ಮಾರಾಟ ಮಾಡಲಾಗದೇ ಹಾಗೂ ಸಕಾಲದಲ್ಲಿ ಆಸ್ತಿ ನೋಂದಣಿ ಮಾರಾಟ ಮಾಡಲಾಗದೇ ಸಾರ್ವಜನಿಕರು ತೊಂದರೆಗೆ ಒಳಗಾಗಿದ್ದು, ಅವರಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರೂ ಪದೇ ಪದೇ ತಲೆದೋರುವ ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣಗಳೇನು; | ಜನವರಿ ಅಂತ್ಯದಲ್ಲಿ ಹಾಗೂ ಫೆಬ್ರುವರಿ ಮೊದಲ ವಾರದಲ್ಲಿ Distributed Denial of Service (DDoS) Attack ನಿಂದಾಗಿ ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜು ನೋಂದಣಿಯಲ್ಲಿ ಎದುರಾಗಿದ್ದ ಸಮಸ್ಯೆಯನ್ನು ಪರಿಹರಿಸಲಾಗಿದ್ದು, CSG ಯು ಕಾಲಕಾಲಕ್ಕೆ ತಂತ್ರಾಂಶವನ್ನು ಉನ್ನತೀಕರಿಸುತ್ತಿದ್ದು, ಪ್ರಸ್ತುತ ಯಾವುದೇ ಸಮಸ್ಯೆಗಳು ಇರುವುದಿಲ್ಲ.<br><br>ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಇದನ್ನು ಜೂನ್-2023 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ತಂತ್ರಾಂಶದ ಕಾರ್ಯಾಚರಣೆಯಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗಿರುತ್ತದೆ.<br><br>ತಂತ್ರಾಂಶದ ಬಳಕೆಯಲ್ಲಿ ಸಾರ್ವಜನಿಕರು ಎದುರಿಸುವ ಸಮಸ್ಯೆ ಹಾಗೂ ಗೊಂದಲಗಳಿಗೆ |

| | | |
|---|---|---|
| | | ತಕ್ಷಣ ಪರಿಹಾರ ಒದಗಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>**1. ಸಹಾಯವಾಣಿ:** ನೂತನ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಕಾಲ ಕರೆ ಕೇಂದ್ರದ ಸಹಯೋಗದೊಂದಿಗೆ ಇಲಾಖೆಯ ಸಹಾಯವಾಣಿಯನ್ನು (080-68265316) ಪ್ರಾರಂಭಿಸಲಾಗಿರುತ್ತದೆ.<br><br>**2. ಟಿಕೇಟಿಂಗ್ ಟೂಲ್:** ಉಪನೋಂದಣಿ ಕಛೇರಿಯಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಟಿಕೇಟಿಂಗ್ ಟೂಲ್ ಒದಗಿಸಲಾಗಿದ್ದು, ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸದರಿ ಟೂಲ್ ಮುಖಾಂತರ ಆನ್‌ಲೈನ್ ನಲ್ಲಿ ತಾಂತ್ರಿಕ ತಂಡಕ್ಕೆ ತಿಳಿಸಬಹುದಾಗಿದೆ.<br><br>**3. ಸರ್ವೀಸ್ ಡೆಸ್ಕ್:** ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಸಮಯದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಕೇಂದ್ರ ಕಛೇರಿಯಲ್ಲಿ 08 ತಾಂತ್ರಿಕ ಸಿಬ್ಬಂದಿಗಳನ್ನೊಳಗೊಂಡ ಸರ್ವೀಸ್ ಡೆಸ್ಕ್ ಸ್ಥಾಪಿಸಲಾಗಿರುತ್ತದೆ.<br><br>**4. ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್ ಹಾಗೂ ಸಿಸ್ಟಂ ಅಡ್ಮೀನ್:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಸ್ಟಂ ಅಡ್ಮೀನ್ ಹಾಗೂ ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳನ್ನು ನೇಮಿಸಲಾಗಿರುತ್ತದೆ. ಹಾರ್ಡವೇರ್‌ನಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಸಿಸ್ಟಂ ಅಡ್ಮೀನ್ ಗಳು ಹಾಗೂ ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳು ಸಹಕರಿಸುತ್ತಿರುತ್ತಾರೆ.<br><br>**5. ಕಾವೇರಿ ಯೋಜನಾ ಉಸ್ತುವಾರಿ ಘಟಕ (KPUM):** ಕೇಂದ್ರ ಕಛೇರಿಯಲ್ಲಿ 05 ತಾಂತ್ರಿಕ ಸದಸ್ಯರನೊಳಗೊಂಡ ಕಾವೇರಿ ಯೋಜನಾ ಉಸ್ತುವಾರಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ ತಂಡವು ತಂತ್ರಾಂಶದ ಅಭಿವೃದ್ಧಿ, ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಗೆ ಅಗತ್ಯ ತಾಂತ್ರಿಕ ಮಾಹಿತಿ ಒದಗಿಸುತ್ತಿದೆ.<br><br>**6. ಸಿಎಸ್‌ಜಿಯಲ್ಲಿನ L2 Support ವ್ಯವಸ್ಥೆ:** ತಂತ್ರಾಂಶದ ಅಭಿವೃದ್ಧಿಗಾರರಾದ ಸಿಎಸ್‌ಜಿ ಸಂಸ್ಥೆಯು ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕಾಗಿ 04 ತಾಂತ್ರಿಕ ಸಿಬ್ಬಂದಿಗಳ L2 Support ವ್ಯವಸ್ಥೆ ಒದಗಿಸಿರುತ್ತದೆ. |

| | | |
|---|---|---|
| | | **7. ಯುಟ್ಯೂಬ್ ಚಾನಲ್:** ಕಾವೇರಿ ತಂತ್ರಾಂಶದಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಟುಟೋರಿಯಲ್‌ಗಳನ್ನು ಸಿದ್ಧಪಡಿಸಿ ಇಲಾಖೆಯ ಯುಟ್ಯೂಬ್ ಚಾನಲ್ ನಲ್ಲಿ ಒದಗಿಸಲಾಗಿರುತ್ತದೆ.<br><br>**8. ಪೋಸ್ಟರ್:** ಕಾವೇರಿ-2 ತಂತ್ರಾಂಶದ ಬಗ್ಗೆ ಮಾಹಿತಿಯನ್ನು ನೀಡಲು ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.<br><br>**9.ತರಬೇತಿ:** i) ಅಧಿಕಾರಿ / ಸಿಬ್ಬಂದಿ : ಇಲಾಖೆಯ ಎಲ್ಲಾ ಅಧಿಕಾರಿ /ಸಿಬ್ಬಂದಿಗಳಿಗೆ ಕೇಂದ್ರ ಕಛೇರಿಯ ಗಣಕೀಕರಣ ತರಬೇತಿ ಕೋಶದಲ್ಲಿ ಕಾವೇರಿ-2.0 ತಂತ್ರಾಂಶದ ತರಬೇತಿ ನೀಡಲಾಗಿರುತ್ತದೆ.<br>ii) ಸಾರ್ವಜನಿಕರು /ದಸ್ತಾವೇಜು ಬರಹಗಾರರು/ ವಕೀಲರು: ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಾಂಶದ ಮೂಲಕ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. |
| ಇ) | ಯಾವ ಕಾಲಮಿತಿಯೊಳಗೆ ಕಾವೇರಿ 2.0 ತಂತ್ರಾಂಶಕ್ಕೆ ಪದೇ ಪದೇ ತಲೆದೋರುತ್ತಿರುವ ಸರ್ವರ್ ಡೌನ್ ಸಮಸ್ಯೆ ಹಾಗೂ ಸದರಿ ತಂತ್ರಾಂಶದಲ್ಲಿನ ಇತರೇ ಎಲ್ಲಾ ಲೋಪ ದೋಷಗಳನ್ನು ಸಂಪೂರ್ಣವಾಗಿ ಪರಿಹರಿಸಿ ಸಾರ್ವಜನಿಕರು ತಮ್ಮ ಸ್ಥಿರಾಸ್ತಿ ದಸ್ತಾವೇಜುಗಳ ನೋಂದಣಿ ವ್ಯವಹಾರಗಳನ್ನು ಯಾವುದೇ ಸಮಸ್ಯೆ ಮತ್ತು ಅನಗತ್ಯ ವಿಳಂಬವಿಲ್ಲದೇ ಮಾಡುವಂತಾಗಲು ಕ್ರಮ ವಹಿಸಲಾಗುವುದು? | ಕಾವೇರಿ-2.0 ತಂತ್ರಾಂಶವು ಸ್ಥಿರಾಸ್ತಿಗಳ ವಹಿವಾಟಿಗೆ ಸಂಬಂಧಿಸಿದಂತೆ ಇತರೆ ಇಲಾಖೆಗಳ ತಂತ್ರಾಂಶಗಳೊಂದಿಗೆ ಸಂಯೋಜನೆಯಾಗಿರುವುದರಿಂದ ಹಾಗೂ ದಸ್ತಾವೇಜಿನ ನೋಂದಣಿಯಲ್ಲಿನ ಪ್ರಕ್ರಿಯೆಗಳು ಕ್ಲಿಷ್ಟಕರವಾಗಿರುವುದರಿಂದ ಕೆಲವೊಮ್ಮೆ ನೋಂದಣಿಯಲ್ಲಿ ಸಮಸ್ಯೆಗಳು ಎದುರಾಗುತ್ತದೆ. ಇವುಗಳನ್ನು ಕೂಡಲೇ ಪರಿಹರಿಸಿ ಸಾರ್ವಜನಿಕರಿಗೆ ಸ್ಲಾಟ್ ಪಡೆದ ದಿನಾಂಕದಂದೇ ನೋಂದಣಿಯನ್ನು ಪೂರ್ಣಗೊಳಿಸಲಾಗುತ್ತಿದೆ.<br><br>2025ನೇ ಸಾಲಿನ ಜನವರಿ ಹಾಗೂ ಫೆಬ್ರುವರಿ ಮಾಹೆಯಲ್ಲಿ Distributed Denial of Service (DDoS) Attack ನಿಂದಾಗಿ ಕಾವೇರಿ-2.0 ತಂತ್ರಾಂಶದಲ್ಲಿ ಎದುರಾದ ಸಮಸ್ಯೆಯನ್ನು ಪರಿಹರಿಸಲಾಗಿದ್ದು, ಹಾಗೂ ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ. ಅಲ್ಲದೇ ಸದರಿ ಪ್ರಕರಣದ ಬಗ್ಗೆ ಸೈಬರ್ ಕ್ರೈಂ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ. |

| | | |
|---|---|---|
| | | ಸಾರ್ವಜನಿಕರು ದಸ್ತಾವೇಜಿನ ನೋಂದಣಿಯನ್ನು ಪೂರ್ಣಗೊಳಿಸಲು ಅನುಕೂಲ ಮಾಡುವ ಸಂಬಂಧ ದಿನಾಂಕ:05-02-2025 ರಿಂದ ಉಪನೋಂದಣಿ ಕಛೇರಿಗಳಲ್ಲಿ ನೋಂದಣಿಯ ಅವಧಿಯನ್ನು ಸಂಜೆ 06:30 ರವರೆಗೆ ವಿಸ್ತರಿಸಲಾಗಿದೆ. |
| ಈ) | ರಾಜ್ಯದಲ್ಲಿ ಕಾವೇರಿ 2.0 ತಂತ್ರಾಂಶದಲ್ಲಿ ಉಂಟಾದ ತಾಂತ್ರಿಕ ತೊಂದರೆಗಳಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದೆಯೇ; ಹಾಗಿದ್ದಲ್ಲಿ, ಆ ನಷ್ಟದ ಪ್ರಮಾಣವೆಷ್ಟು? | ಕಾವೇರಿ-2.0 ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆಗಳಿಂದಾಗಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. |

ಕಂಇ/51/ಎಂಎನ್ಎಸ್ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು